ಒ.ಎಸ್. ನಂ.95/2019
ಪಿಡಬ್ಲು-1

ದಿನಾಂಕ 27.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ದಾವಾ ಸ್ವತ್ತಿನ ಹಿಂದಿನ ಮಾಲಿಕರು ರಾಯಪ್ಪ ಎಂದರೆ ಸರಿ. ಸದರಿ ರಾಯಪ್ಪನಿಗೆ ನಿಂಗಪ್ಪ, ಹಣಮಂತ, ನಾಗಪ್ಪ ಎಂಬ 3-ಜನ ಮಕ್ಕಳು ಎಂದರೆ ಸರಿ. ನಾಗಪ್ಪನಿಗೆ ಮಕ್ಕಳು ಮತ್ತು ವಾರಸುದಾರರು ಇಲ್ಲ ಎಂದರೆ ಸರಿ. ನಾಗಪ್ಪನಿಗೆ ನಿಂಗಪ್ಪ ಮತ್ತು ಹಣಮಂತರವರೆ ವಾರಸುದಾರರು ಎಂದರೆ ಸರಿ. ನಿಂಗಪ್ಪನ ಮಗ ಸಕ್ರೆಪ್ಪ ಎಂದರೆ ಸರಿ. ಸಕ್ರೆಪ್ಪನ ಮಗನ ಹೆಸರು ದತ್ತಪ್ಪ ಮತ್ತು ದತ್ತಪ್ಪ ನನ್ನ ಎಂದರೆ ಸರಿ. ಸದರಿ ದತ್ತಪ್ಪ ಮೃತಪಟ್ಟಿರುತ್ತಾನೆ ಎಂದರೆ ಸರಿ.

ಹಣಮಂತನಿಗೆ ಶಾಂತಪ್ಪ ಮತ್ತು ರಾಯಪ್ಪ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ಶಾಂತಪ್ಪನಿಗೆ ಹಣಮಂತ, ನಿಂಗಪ್ಪ, ಅಮೃತ, ನಾಗಪ್ಪ ಎಂಬ ಮಕ್ಕಳಿರುತ್ತಾರೆ ಎಂದರೆ ಸರಿ. ಸದರಿ ಶಾಂತಪ್ಪನ ಹೆಂಡತಿಯ ಹೆಸರು ಮರೆವ್ವ ಎಂದರೆ ಸರಿ. ರಾಯಪ್ಪನಿಗೆ ನಾರಾಯಣಕರ ಮತ್ತು ಮಹೆಂದ್ರ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ.

ನನ್ನ ಗಂಡ ದತ್ತಪ್ಪ ಈ ಹಿಂದೆ 1ನೆ ಪ್ರತಿವಾದಿಯ ಮೇಲೆ ಸರ್ವೆ ನಂ.217/ಇ ಒಟ್ಟು 06-ಎಕರೆ 08-ಗುಂಟೆಗೆ ಸಂಬಂಧಿಸಿದಂತೆ ಅಸಲು ದಾವೆ ನಂ.164/2012 ಸಲ್ಲಿಸಿದ್ದ ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿದ್ದಾಗ ನನ್ನ ಗಂಡ ಮೃತಪಟ್ಟಿರುತ್ತಾನೆ ಎಂದರೆ ಸರಿ. ಸದರಿ ಮರೆವ್ವರವರು ಅಪೀಲು ನಂ.16/2017 ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅಪೀಲಿನಲ್ಲಿ ವಾದಿ ಮತ್ತು ಪ್ರತಿವಾದಿಯರಿಗೆ 1/3 ಭಾಗ ಎಂದು ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾರಾಯಣಕರ ಮತ್ತು ಮಹೇಂದ್ರರವರಿಗೆ 1/3 ಭಾಗ ಪಾಲು ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಗಂಡ ದತ್ತಪ್ಪರವರಿಗೆ 1/3 ಭಾಗ ಆಗಿರುತ್ತದೆ ಎಂದರೆ ಸರಿ.

ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿ ನನ್ನ ಮಾವನ ಆಸ್ತಿ ಎಂದು ಹೇಳುತ್ತಾರೆ. ದಾವಾಸ್ತಿ ನನ್ನ ಮಾವನ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ತಿ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ವಾದಿ ಮತ್ತು ಪ್ರತಿವಾದಿಯರಿಗೆ 1/3 ಭಾಗ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವೆ ನಂ.164/201 ರಲ್ಲಿ ನಾರಾಯಣಕರ ಮತ್ತು ಮಹೇಂದ್ರರವರು ಪಕ್ಷಗಾರರು ಇದ್ದರು ಎಂದರೆ ಸರಿ. ನಾರಾಯಣಕರ ಮತ್ತು

ಮಹೇಂದ್ರರವರಿಗೂ ಸಹ ದಾವಾಸ್ತಿಯಲ್ಲಿ ಪಾಲು ಇದೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾರಾಯಣಕರ ಮತ್ತು ಮಹೇಂದ್ರರವರಿಗೆ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಎಂದು ಹೇಳುತ್ತಾರೆ.

2017-18 ರಲ್ಲಿ ದಾವಾಸ್ತಿಯು 1ನೆ ಪ್ರತಿವಾದಿಯ ಹೆಸರಿಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 24.11.2017 ರಲ್ಲಿ 1ನೆ ಪ್ರತಿವಾದಿಯ ಹೆಸರು ತೆಗೆದು 08-ಗುಂಟೆ ಜಮೀನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಅದೇ ದಿನ ನಾರಾಯಣಕರ ಮತ್ತು ಮಹೇಂದ್ರರವರಿಗೆ 08-ಗುಂಟೆ ಜಮೀನು ಮುಟೇಷನ ಆಗಿರುತ್ತದೆ ಎಂದರೆ ಸರಿಯಲ್ಲ. 1ನೆ ಪ್ರತಿವಾದಿಯ ಹಕ್ಕು ಮುಳುಗುವ ಉದ್ದೇಶದಿಂದ ದಾವಾಸ್ತಿ 08-ಗುಂಟೆ ಮತ್ತೊಂದು 08-ಗುಂಟೆ ಜಮೀನುಗಳನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ. 1ನೆ ಪ್ರತಿವಾದಿಯ ಹೆಸರಿನಲ್ಲಿದ್ದ ಜಮೀನನ್ನು ನನ್ನ ಹೆಸರಿಗೆ ಮಾಡಿಕೊಂಡು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. 2018 ರ ಪಹಣಿಯಲ್ಲಿ 1ನೆ ಪ್ರತಿವಾದಿ, ಹಣಮಂತ, ನಾಗಪ್ಪರವರ ಹೆಸರಿನಲ್ಲಿತ್ತು ಎಂದರೆ ಸರಿ. 1ನೆ ಪ್ರತಿವಾದಿಗೆ ವಯಸ್ಸಾದ ಕಾರಣ ಆಕೆಗೆ ಗೊತ್ತಾಗದಂತೆ ದಾವಾಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿ ನನ್ನ ಮಾವನ ಆಸ್ತಿ ಇರುವುದರಿಂದ ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. ದಾವಾಸ್ತಿ ನನ್ನ ಹೆಸರಿಗೆ ಮಾಡಿಕೊಳ್ಳಲು ಮರೆವ್ವಳ ಸಹಿಯನ್ನು ನಾನು ಪಡೆದಿಲ್ಲ ಎಂದರೆ ಸರಿ. 1ನೆ ಪ್ರತಿವಾದಿಯ ಹೆಸರು ಪಹಣಿಯಿಂದ ತೆಗೆಯಲು ಯಾವುದಾದರೂ ಕಾಗದ ಪತ್ರಗಳನ್ನು ಬರೆದುಕೊಟ್ಟಿದ್ದಾರಾ ಎಂದರೆ ಸಾಕ್ಷಿ ಬರೆದುಕೊಟ್ಟಿಲ್ಲ ಎಂದು ಹೇಳುತ್ತಾರೆ. ನಾನು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ದಾವಾಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿ ನನ್ನ ಮಾವನ ಆಸ್ತಿ ಇರುವುದರಿಂದ ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದು ಹೇಳುತ್ತಾರೆ.

ನಾರಾಯಣಕರ ಮತ್ತು ಮಹೇಂದ್ರರವರ ಹೆಸರಿನಲ್ಲಿ 08-ಗುಂಟೆ ಜಮೀನು ಇದೆ ಎಂದರೆ ಸರಿಯಲ್ಲ. ಸರ್ವೆ ನಂ.230 ರಲ್ಲಿ ಸ್ವಲ್ಪ ಭಾಗವನ್ನು ಪೂಜಾರಿ ಎನ್ನುವವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಪೂಜಾರಿರವರಿಗೆ ಸ್ವಲ್ಪ ಜಮೀನು ಮಾರಾಟ ಮಾಡಿದ ಮೇಲೆ ಈ ದಾವೆ ಹಾಕಿರುತ್ತೇನೆ ಎಂದರೆ ಸರಿ. ದಾವಾಸ್ತಿಗೆ ಪ್ರತಿವಾದಿಯರೆ ಈಗಲೂ ಸಹ ಮಾಲಿಕರು ಮತ್ತು ಕಬ್ಜೆದಾರರು ಎಂದರೆ ಸರಿಯಲ್ಲ. 50-60 ವರ್ಷಗಳಿಂದ ದಾವಾಸ್ತಿಯಲ್ಲಿ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಪ್ರತಿವಾದಿಯರು ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಪತ್ರಾ ಶೆಡ್ಡನ್ನು ಹಾಕಿರುತ್ತಾರೆ ಎಂದು ಹೇಳುತ್ತಾರೆ. ದಾವಸ್ತಿಯಲ್ಲಿ ಶಾಂತಪ್ಪ, ಹಣಮಂತ, ನಿಂಗಪ್ಪರವರ ಸಮಾದಿಗಳಿವೆ ಎಂದರೆ

ಸರಿ. ದಾವಾಸ್ತಿಯನ್ನು ಖೊಟ್ಟಿ ರೀತಿಯಿಂದ ನನ್ನ ಹೆಸರಿಗೆ ಮಾಡಿಕೊಂಡು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ